**ದಿಃ 21.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ತೀರ್ಪು ಋಣಿದಾರರು(ಬಿ)(ಡಿ)(ಇ)(ಎಫ್) ಪರ ಶ್ರೀ ಎಂ ಎ ಎನ್ ವಕೀಲರಿಂದಃ –**

ನಿಮ್ಮ ವಿದ್ಯಾರ್ಹತೆ ಏನು ಎಂದರೆ ಬಿ ಎ ಎಂ ಎಸ್ ಎಂ ಎಸ್ ಎನ್ನುತ್ತಾರೆ. ಯಾವ ವರ್ಷ ಬಿ ಎ ಎಂ ಎಸ್ ಎಂ ಎಸ್ ಪೂರ್ಣ ಗೊಂಡಿತ್ತು ಎಂದರೆ 2000 ನೇ ಇಸ್ವಿಯಲ್ಲಿ ಮತ್ತು ಎಂ ಎಸ್ ಪೂರ್ಣ ಗೊಂಡಿದ್ದು 2009 ನೇ ಇಸ್ವಿಯಲ್ಲಿ ಎನ್ನುತ್ತಾರೆ. ಯಾವ ತಿಂಗಳಲ್ಲಿ ಪೂರ್ಣಗೊಂಡಿತ್ತು ಎಂದರೆ ತಿಂಗಳು ನೆನಪಿಲ್ಲಾ ನಂವೆಂಬರ ಅಥವಾ ಡಿಸೆಂಬರ 2009 ಇರಬಹುದು ಎನ್ನುತ್ತಾರೆ. ಯಾವ ಉದ್ದೇಶಕ್ಕಾಗಿ ಈ ಜಾರಿ ಅರ್ಜಿ ಹಾಕಿದ್ದಾರೆ ಗೊತ್ತಾ ಎಂದರೆ ಗೊತ್ತಿದೆ ಹಣ ವಸೂಲಾತಿಗಾಗಿ ಹಾಕಿದ್ದಾರೆ ಎನ್ನುತ್ತಾರೆ. ಸದರಿ ಜಾರಿ ಅರ್ಜಿಯು ಯಾವ ದಾವೆಗೆ ಸಂಬಂಧಪಟ್ಟಿದೆ ಆ ದಾವೆಯ ನಂಬರ ಏನು ಎಂದರೆ ಹಳೆ ಮೂಲ ದಾವಾ ಸಂಖ್ಯೆ 119/2006 ಹೊಸ ಮೂಲ ದಾವಾ ಸಂಖ್ಯೆ 32/2009 ಆಗಿರುತ್ತದೆ ಎನ್ನುತ್ತಾರೆ. ಎಷ್ಟು ಮೊತ್ತಕ್ಕೆ ಸದರಿ ದಾವೆಯನ್ನು ಹೂಡಿದ್ದಾರೆ ಗೊತ್ತಾ ಎಂದರೆ 60 ಸಾವಿರ ರೂಪಾಯಿಗೆ ಎನ್ನುತ್ತಾರೆ. ಮೂಲ ದಾವಾ ಸಂಖ್ಯೆ 32/2009 ರಲ್ಲಿ ತೀರ್ಪು ಆದ ನಂತರ ಏನಾಗಿರುತ್ತದೆ ಗೊತ್ತಾ ಎಂದರೆ ಸಾಕ್ಷಿ ನಮ್ಮ ತಂದೆಯ ಪರವಾಗಿ ಡಿಕ್ರಿ ಆಗಿದೆ ಪ್ರತಿವಾದಿಯು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಿದ್ದರು ಅವರ ಅಪೀಲು ವಜಾಗೊಂಡಿರುತ್ತದೆ ಎನ್ನುತ್ತಾರೆ. ಸದರಿ ಅಪೀಲು ವಜಾ ಆದ ನಂತರ ಮುಂದೆ ಏನಾಯಿತು ಎಂದು ನಿಮಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಈ ಜಾರಿ ಪ್ರಕರಣವನ್ನು ನಿಮ್ಮ ತಂದೆಯವರು ಸಲ್ಲಿಸಿದರು ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ನಿಮ್ಮ ತಂದೆಯವರು ಈ ಜಾರಿ ಪ್ರಕರಣ ಚಾಲ್ತಿ ಇದ್ದಾಗ ಮೃತ ಹೊಂದಿರುತ್ತಾರೆಂದರೆ ಸರಿ. ಈ ಜಾರಿ ಅರ್ಜಿಯಲ್ಲಿ ನಿಮ್ಮ ತಂದೆಯವರು ಮೃತ ಹೊಂದಿದ ನಂತರ ಅವರ 2 ನೇ ಹೆಂಡತಿ ರತ್ನಮ್ಮ ಮತ್ತು ಅವರ ಮಕ್ಕಳು ಅಶ್ವಿನಿ ನಂಜನಗೌಡ, ರಾಜೇಶ್ವರಿ ನಂಜನಗೌಡ, ಅಮೃತ ವರ್ಶಿಣಿ ನಂಜನಗೌಡ ರವರುಗಳು ನಮ್ಮನ್ನು ಮತ್ತು ನಿಮ್ಮನ್ನು ನಿಮ್ಮ ತಾಯಿಯನ್ನು ಮೃತ

ನಾಗೇಂದ್ರಪ್ಪನ ವಾರಸುದಾರರಾಗಿ ಈ ಜಾರಿ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಮಾಡಿ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅರ್ಜಿ ಸಲ್ಲಿಸಿರುವವುದು ನಿಜ ಆದರೆ ನನ್ನನ್ನು ಮತ್ತು ನನ್ನ ತಾಯಿಯನ್ನು ಹೊರತುಪಡಿಸಿ ಸದರಿ ರತ್ನಮ್ಮ, ಅಶ್ವಿನಿ ನಂಜನಗೌಡ, ರಾಜೇಶ್ವರಿ ನಂಜನಗೌಡ, ಅಮೃತ ವರ್ಶಿಣಿ ನಂಜನಗೌಡ ರವರಿಗೂ ನಮಗೂ ಯಾವುದೇ ಸಂಬಂಧ ಇಲ್ಲಾ. ಸದರಿ ಅವರು ಈ ಪ್ರಕರಣದಲ್ಲಿ ಅರ್ಜಿ ಸಲ್ಲಿಸಿದ್ದು ದಿನಾಂಕ 27.09.2021 ಎಂದರೆ ಸರಿ. ಸದರಿ ಯವರು ಸಲ್ಲಿಸಿದ ಅರ್ಜಿಗೆ ನೀವು ತಕರಾರನ್ನು ಹಾಕಿ ನಂತರ ದಿನಾಂಕ 23.12.2021 ರಂದು ನೀವು ಮಧ್ಯಕಾಲಿಕ ಅರ್ಜಿನಂಬರ 2 ನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನೆನಪು ಇಲ್ಲ ನಮ್ಮ ವಕೀಲರ ಮೂಲಕ ಸಲ್ಲಿಸಿದ್ದೇನೆ ಎನ್ನುತ್ತಾರೆ. ರತ್ನಮ್ಮ, ಅಶ್ವಿನಿ ನಂಜನಗೌಡ, ರಾಜೇಶ್ವರಿ ನಂಜನಗೌಡ, ಅಮೃತ ವರ್ಶಿಣಿ ನಂಜನಗೌಡ ರವರು ಅರ್ಜಿ ಸಲ್ಲಿಸಿದ ನಂತರ ನೀವು ಸಲ್ಲಿಸಿದ್ದೀರಾ ಎಂದರೆ ಸರಿ. ಸದರಿಯವರು ಅರ್ಜಿ ಸಲ್ಲಿಸುವ ಪೂರ್ವದಲ್ಲಿ ನೀವು ಈ ಪ್ರಕರಣದಲ್ಲಿ ಅರ್ಜಿ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಇಲ್ಲಾ. ನೀವು ಇದೆ ನ್ಯಾಯಾಲಯದಲ್ಲಿ ಓ ಎಸ್ ನಂಬರ 15/2013 ನ್ನು ನಿಮ್ಮ ತಂದೆಯ ವಿರುದ್ಧ ವಿಬಾಗ ಕೋರಿ ಸಲ್ಲಿಸಿದ್ದೀರಾ ಎಂದರೆ ಸರಿ. ಸದರಿ ದಾವೆಯಲ್ಲಿ ನಿಮ್ಮ ತಂದೆಯವರು ಹಾಜರಾಗಿ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದರೆ ಸರಿ. ನಿಮ್ಮ ತಂದೆ ನಾಗೇಂದ್ರಪ್ಪನವರು ಓ ಎಸ್ ನಂಬರ 15/2013 ರಲ್ಲಿ ಅವರ ಸಾಕ್ಷ್ಯ ವಿಚಾರಣೆಯನ್ನು ನೀಡಿದ್ದಾರೆಂದರೆ ಸರಿ. ನಿಮ್ಮ ತಂದೆ ನಾಗೇಂದ್ರಪ್ಪನವರು ಅವರ ಲಿಖಿತ ಹೇಳಿಕೆಯಲ್ಲಿ ಏನನ್ನು ಹೇಳಿರುತ್ತಾರೆ ಎಂಬ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಹೌದು ಎನ್ನುತ್ತಾರೆ. ನಿಮ್ಮ ತಂದೆಯವರು ಅವರು ಸಲ್ಲಿಸಿದ ಲಿಖಿತ ಹೇಳಿಕೆಯಲ್ಲಿ ನನಗೆ 2 ನೇ ಹೆಂಡತಿ ರತ್ನಮ್ಮ, ಮತ್ತು ಮಕ್ಕಳಾದ ಅಶ್ವಿನಿ ನಂಜನಗೌಡರ್ ರಾಜೇಶ್ವರಿ ನಂಜನಗೌಡರ್ ಮತ್ತು ಅಮೃತ ವರ್ಷಿಣಿ ನಂಜನಗೌಡ ಎಂಬ ಮಕ್ಕಳು ಇದ್ದಾರೆಂದು ಹೇಳಿರುತ್ತಾರೆಂದರೆ ಸರಿಯಲ್ಲ. ನಿಮ್ಮ ತಂದೆ ನಾಗೇಂದ್ರಪ್ಪನವರು ಆ ರೀತಿ ಲಿಖಿತ ಹೇಳಿಕೆಯಲ್ಲಿ ಹೇಳಿದ್ದರೂ ಕೂಡ ಇಲ್ಲಾ ಎಂದು ಸುಳ್ಳು

ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ತಂದೆ ನಾಗೇಂದ್ರಪ್ಪನವರು ನೀವು ಸಲ್ಲಿಸಿದ ದಾವೆವು ಅವಶ್ಯಕ ಪಕ್ಷಗಾರರು ಎಂದರೆ ಮೇಲೆ ಹೇಳಿದ ಅವರ ಹೆಣ್ಣುಮಕ್ಕಳನ್ನು ದಾವೆಗೆ ಸೇರಿಸಿಲ್ಲಾದ ಕಾರಣ ದಾವೆ ಊರ್ಜಿತವಲ್ಲಾ ಎಂದರೆ ಸರಿಯಲ್ಲ. ಅವರು ಪ್ರತಿವಾದ ಪತ್ರವನ್ನು ಸಲ್ಲಿಸಿದಂತೆ ಸಾಕ್ಷಿಯನ್ನು ಸಹ ಕೊಟ್ಟಿದ್ದಾರೆಂದರೆ ಸರಿಯಲ್ಲ. ಸದರಿ ನಾಗೇಂದ್ರಪ್ಪನವರು ಸಾಕ್ಷಿ ನುಡಿದಿದ್ದರೂ ಕೂಡ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ರತ್ನಮ್ಮ ಮತ್ತು ಅವರ ಮಕ್ಕಳು ಏನೇನು ದಾಖಲೆಗಳು ಹಾಕಿದ್ದಾರೆಂದು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ತಿಳಿದುಕೊಂಡಿದ್ದೇನೆ ಎನ್ನುತ್ತಾರೆ. ಓ ಎಸ್ ನಂಬರ 15/2013 ರಲ್ಲಿ ಪ್ರತಿವಾದಿ ನಾಗೇಂದ್ರಪ್ಪನವರು ತಮ್ಮ ವಕೀಲರ ಮೂಲಕ ಮಧ್ಯಕಾಲಿಕ ಅರ್ಜಿ ಸಂಖ್ಯೆ 15 ನ್ನು ಸಿವಿಲ್ ಸಿ ಪಿ ಸಿ ಆದೇಶ 14 ನಿಯಮ 5 ರ ಅಡಿಯಲ್ಲಿ ಸಲ್ಲಿಸಿದರು ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲಾ ಎನ್ನುತ್ತಾರೆ. ಸದರಿ ಅರ್ಜಿಯನ್ನ ಈ ನ್ಯಾಯಾಲಯವು ಪುರಸ್ಕರಿಸಿದೆ ಎಂದರೆ ನನಗೆ ಗೊತ್ತಿಲ್ಲಾ ಎನ್ನುತ್ತಾರೆ. ನಂತರ ನೀವು ಧಾರವಾಡ ಉಚ್ಚ ನ್ಯಾಯಾಲಯಕ್ಕೆ ಈ ನ್ಯಾಯಾಲಯವು ಮಾಡಿದ ಆದೇಶದ ವಿರುದ್ಧ ರಿಟ್ ಅರ್ಜಿ ಸಲ್ಲಿಸಿದ್ರಿ ಎಂದರೆ ಸರಿ. ಆ ರಿಟ್ ಅರ್ಜಿ ಚಾಲ್ತಿ ಇದ್ದಾಗ ನಿಮ್ಮ ತಂದೆ ಮೃತ ಹೊಂದಿರುತ್ತಾರೆಂದರೆ ಸರಿ. ನಿಮ್ಮ ತಂದೆಯವರು ಮೃತ ಪಟ್ಟ ನಂತರ ಅವರ 2 ನೇ ಹೆಂಡತಿ ರತ್ನಮ್ಮ ಮತ್ತು ಮಕ್ಕಳು ಸಿ ಪಿ ಸಿ ಆದೇಶ 22 ನಿಯರು 4 ರ ಅಡಿಯಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದೆ ನೀವು ಸಲ್ಲಿಸಿದ ರಿಟ್ ಅರ್ಜಿಯಲ್ಲಿ ಮಧ್ಯಕಾಲಿಕ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.ಅವರು ಸಲ್ಲಿಸಿದ ಅರ್ಜಿಯು ಗೌರವಾನ್ವಿತ ನ್ಯಾಯಾಲಯದಲ್ಲಿ ಅಂಗೀಕಾರ ಆಗಿದೆ ಎಂದರೆ ಸರಿ. ಗೌರವಾನ್ವಿತ ಉಚ್ಚ ನ್ಯಾಯಾಲಯವು ಸದರಿ ಓ ಎಸ್ ನಂಬರ 15/2013 ರಲ್ಲಿ ಮೂಲ ಪ್ರತಿವಾದಿಯ ಹೆಸರನ್ನು ರೌಂಡ್ ಆಫ್ ಮಾಡಿ ರತ್ನ ಮತ್ತು ಅವರ ಮಕ್ಕಳನ್ನು 2 ರಿಂದ 5 ಪ್ರತಿವಾದಿಗಳಾಗಿ ದಾವೆಗೆ ಸೇರಿಸಲು ಆದೇಶಿಸಿರುತ್ತದೆ ಎಂದರೆ ಸರಿ. ಆ ಆದೇಶದ ಪ್ರಕಾರ ರತ್ನಮ್ಮ ಮತ್ತು ಅವರ ಮಕ್ಕಳು ಓ ಎಸ್ ನಂಬರ 15/2013 ರಲ್ಲಿ ಪ್ರತಿವಾದಿ 2

ರಿಂದ 5 ಎಂದು ಸೇರ್ಪಡೆಗೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಜೆರಾಕ್ಸ ಪ್ರತಿಯ ದಾಖಲೆಯನ್ನು ತೋರಿಸಿ ಸದರಿ ಪ್ರತಿಯಲ್ಲಿ ಇರುವ ಸಹಿ ನಿಮ್ಮದೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ನೋಡಿ ಗುರುತಿಸಿದ ಸಹಿ ಇರುವ ದಾಖಲೆಯನ್ನು ನಿ ಆರ್ 3 ಎಂದು ಗುರುತಿಸಲಾಯಿತು. ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿಯಮಿತ ಉಚ್ಚಂಗಿ ದುರ್ಗ ಸಂಘದಲ್ಲಿ ಯಶಶ್ವಿನಿ ಕಾರ್ಡ ಮಾಡಿಸಲು ನೀವೇ ಅರ್ಜಿಯನ್ನು ಕೊಟ್ಟು ಅದರಲ್ಲಿ ಎನ್ ಜಿ ನಾಗೇಂದ್ರಪ್ಪ, ಎನ್ ಜಿ ರತ್ನಮ್ಮ ಅಶೋಕ ನಂಜನಗೌಡರ್ ಸದಸ್ಯರ ಹೆಸರನ್ನು ನೀವೇ ಹೇಳಿ ಬರೆಸಿದ್ದೀರಾ ಎಂದರೆ ಸುಳ್ಳು ಎನ್ನುತ್ತಾರೆ. ಆ ಯಶಶ್ವಿನಿ ಕಾರ್ಡ ನಲ್ಲಿ ನಿಮ್ಮ ಸಹಿ ಇದೆ ಎಂದರೆ ಸುಳ್ಳು ಎನ್ನುತ್ತಾರೆ. ನೀವೇ ಯಶಶ್ವಿನಿ ಕಾರ್ಡಗೆ ಅರ್ಜಿಕೊಟ್ಟು ಅದರಲ್ಲಿ ನಿಮ್ಮ ಸಹಿ ಮಾಡಿದ್ದರೂ ಕೂಡ ಇಲ್ಲಾ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋ ದೃಢಿಕೃತ ನಕಲನ್ನು ತೋರಿಸಿ ಸದರಿ ಪೋಟೋದಲ್ಲಿ ಇರುವ ವ್ಯಕ್ತಿ ನೀವೇನಾ ಎಂದರೆ ಹೌದು ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಪೋಟೋದ ದೃಢಿಕೃತ ನಕಲನ್ನು ಈಗಾಗಲೇ ನಿ ಪಿ 13 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ಗುರುತಿಸಿದ ಅವರ ಪೋಟೋವನ್ನು ನಿ ಪಿ 13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಸದರಿ ನಿ ಪಿ 13 ರ ಪೋಟೋದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾವರನ್ನು ಸೃಷ್ಟಿಸಿ ಕೊಂಡಿರುತ್ತಾರೆ ಎನ್ನುತ್ತಾರೆ.

**(ಮುಂದುವರಿದ ಪಾಟೀ ಸವಾಲು ಮಾಡಲು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.